3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ್ರ.ನ್ಯಾ.ದಂ.,ರವರ ನ್ಯಾಯಾಲಯ, ಕಡೂರು

ಓ.ಎಸ್.ನಂ.388/2016

ದಿನಾಂಕಃ22-07-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯುಃ1

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಪಿ.ಎನ್ ಪ್ರತಿವಾದಿಗಳ ಪರ ವಕೀಲರಿಂದಃ-**

ದಾವಾ ಆಸ್ತಿಯ ಮೂಲ ಸ.ನಂ.ನಿಂದ ನಿವೇಶವಾಗಿ ಮಾರ್ಪಡಿಸಿದ ಬಗ್ಗೆ ಯಾವುದೇ ಆದೇಶದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಕ್ರಯಕ್ಕೆ ಪಡೆಯ ಮುಂಚೆ ಆ ದಾಖಲೆಗಳನ್ನು ಪರಿಶೀಲಿಸಿದ್ದೇನೆ. ಅನ್ಯಕ್ರಾಂತದ ದಾಖಲೆಯಲ್ಲಿ ಉತ್ತರ ದಿಕ್ಕಿಗೆ ಕೆ.ಎಮ್ ರಸ್ತೆ ಎಂದು ತೋರಿಸಲಾಗಿರುತ್ತದೆ. ಕೆಎಂ ರಸ್ತೆಯನ್ನು ಆ ದಾಖಲೆಯಲ್ಲಿ ಪಶ್ಚಿಮಕ್ಕೆ ತೋರಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ನಕ್ಷೆಯನ್ನು ತೋರಿಸಿ ಸದರಿ ನಕ್ಷೆಯಲ್ಲಿ ಕಾಣಿಸಿರುವಂತೆ ನಿವೇಶನಗಳು ಇವೆ ಇದೆ ಹೇಳಲಾಗಿ ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಚಿಕ್ಕಮಗಳೂರು ಕಡೆಗೆ ಎಂದು ತೋರಿಸಿರುವ ವೀರಣ್ಣಗುಪ್ತ ಪ್ರಾಪರ್ಟಿ ಎಂದು ಬರೆದಿರುವ ಆಸ್ತಿಯೇ ದಾವಾ ಆಸ್ತಿ ಎಂದರೆ ಸರಿ. ರವೀಂದ್ರಕುಮಾರ್ ರವರು ಬರೆಸಿಕೊಂಡಿರುವ ತಿದ್ದುಪಡಿ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ. ರವೀಂದ್ರಕುಮಾರ್ ರವರು ಬರೆಸಿಕೊಂಡಿರುವ ಮೂಲ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದವಾ ಆಸ್ತಿಯನ್ನು ಚಾವ್ಡರವರಿಂದ ನಾನು ನನ್ನ ಮುಖ್ಯ ವಿಚಾರಣೆಯೊಂದಿಗೆ ಆಸ್ತಿ ತೆರಿಗೆ ನಮೂನೆ-3 ರ ರಿಜಿಸ್ಟರ್ ನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ದಿಃ18-03-2011 ರ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-2 ಎಂದು, ಪ್ರಪತ್ರ ನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-3 ಎಂದು, ಕಂದಾಯ ರಶೀದಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-4 ಎಂದು, ಎಸ್.ಎ.ಎಸ್ ಫಾರಂ ನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ರವೀಂದ್ರವರಿಂದ ಖರೀದಿಸಿದ ದಾವಾ ಆಸ್ತಿಯು ಕೆ.ಎಂ ರಸ್ತೆ 198 ಅಡಿ ಎಂದು ಬರೆದಿದ್ದನ್ನು 36 ವರ್ಷಗಳ ನಂತರ ಕೆ.ಎಂ ರಸ್ತೆಕಡೆಗೆ 280 ಅಡಿ ಎಂದು ತಿದ್ದುಪಡಿಕ್ರಯಪತ್ರ ಮಾಡಿಸಿಕೊಂಡಿದ್ದೆವೆಂದರೆ ಸರಿ. ಕೆ.ಎಂ ರಸ್ತೆಯ ಪಕ್ಕದಲ್ಲಿ ಹೆಚ್ಚು ವಿಸ್ತೀರ್ಣದ ಆಸ್ತಿ ಪಡೆಯಲು ಸದರಿ ತಿದ್ದುಪಡಿ ಕ್ರಯಪತ್ರವನ್ನು ಮಾಡಿಸಿಕೊಂಡಿದ್ದೆವೆಂದರೆ ಸರಿಯಲ್ಲ. ಕೆ.ಎಂ ರಸ್ತೆಯು ಹಿಂದಿನಿಂದಲೂ ಯಾವ ದಿಕ್ಕಿನಲ್ಲಿದೆಯೇ ಅದೇ ದಿಕ್ಕಿನಲ್ಲಿ ಇದೆ. ಕೆ.ಎಂ ರಸ್ತೆಯ ದಾವಾ ಆಸ್ತಿಯ ಉತ್ತರ ದಿಕ್ಕಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಿಂತು ನೋಡಿದರೆ ನೋಡಿದರೆ

ಕೆ.ಎಂ ರಸ್ತೆಯ ಪಶ್ಚಿಮ ದಿಕ್ಕಿನಲ್ಲಿ ಇದೆ ಎಂದರೆ ಸರಿಯಲ್ಲ. ಪಶ್ಚಿಮ ಮತ್ತು ಉತ್ತರ ದಿಕ್ಕಿನ ಮದ್ಯೆ ವಾಯುವ್ಯ ದಿಕ್ಕು ಬರುತ್ತದೆ ಎಂದರೆ ಗೊತ್ತಿಲ್ಲ. ಕೆ.ಎಂ ರಸ್ತೆಯ ದಾವಾ ಆಸ್ತಿಯು ವಾಯುವ್ಯ ದಿಕ್ಕಿಗೆ ಬರುತ್ತದೆ ಎಂದರೆ ನನಗೆ ವಾಯುವ್ಯ ದಿಕ್ಕು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ನಿವೇಶನ ಮತ್ತು 1 ನೇ ಪ್ರತಿವಾದಿಯ ಪಕ್ಕದಲ್ಲಿಯಾ ಸಹ ಕೆ.ಎಂ ರಸ್ತೆ ಬರುತ್ತದೆ ಎಂದರೆ ಸರಿ. ಕೆ.ಎಂ ರಸ್ತೆಯ ಪಕ್ಕದಲ್ಲಿ ಹೆಚ್ಚಿನ ಆಸ್ತಿಯನ್ನು ಪಡೆಯಲು ತಿದ್ದುಪಡಿ ಕ್ರಯಪತ್ರಮಾಡಿಸಿಕೊಂಡು 1 ನೇ ಪ್ರತಿವಾದಿಯ ಸ್ವತ್ತನ್ನು ಕಬಳಿಸಲು ಸುಳ್ಳು ದಾವಾ ದಾಖಲಿಸಿದ್ದೇನೆಂದರೆ ಸರಿಯಲ್ಲ. ಚಾವ್ಡಾವರಿಂದ ರವೀಂದ್ರಕುಮಾರ್ ರವರಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ಉತ್ತರ ದಿಕ್ಕಿಗೆ 280 ಅಡಿಗಳು ಮತ್ತು ಪಶ್ಚಿಮಕ್ಕೆ ಕೆ.ಎಂ ರಸ್ತೆ ಮತ್ತು 198 ಅಡಿಗಳು ಎಂದು ಬರೆದಿತ್ತು ಆದರೆ ನಮ್ಮ ತಿದ್ದುಪಡಿ ಕ್ರಯಪತ್ರದಲ್ಲಿ ಉತ್ತರ ದಿಕ್ಕಿಗೆ ಕೆ.ಎಂ ರಸ್ತೆ ಎಂದು ತೋರಿಸಿ ಉತ್ತರ ದಿಕ್ಕಿನಲ್ಲಿ 280 ಅಡಿಗಳು ಎಂದು ಬರೆಸಿಕೊಂಡಿರುತ್ತೇವೆಂದರೆ ಸರಿ.ಸದರಿ ಕಾರಣದಿಂದಲೇ ನಾನು ಚಾವ್ಡಾರವರು ಬರೆದುಕೊಟ್ಟ ಕ್ರಯಪತ್ರ ಮತ್ತು ತಿದ್ದುಪಡಿ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪ್ರತಿವಾದಿಗಳು ಯಾವತ್ತು ತಂಟೆ ತಕರಾರು ಮಾಡಿರುವುದಿಲ್ಲ ಬದಲಾಗಿ ಪ್ರತಿವಾದಿಯ ಆಸ್ತಿ ಕಬಳಿಸಲು ನಾನೇ ತಂಟೆ ತಕರಾರು ಮಾಡಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಆಸ್ತಿಗೆ ತಕರಾರು ಪಡಿಸಿ ಒತ್ತುವರಿ ಮಾಡಲು ಪ್ರಯತ್ನಿಸಿದ್ದರಿಂದ ಪ್ರತಿವಾದಿಗಳು ನನ್ನ ವಿರುದ್ದ ಇದೇ ನ್ಯಾಯಾಲಯಲ್ಲಿ ಅಸಲು ದಾವಾ ಸಂಖ್ಯೆ:376/2016 ನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.